**ಸುದ್ದಿ ಸಂಚಯ**

# ರಾಮಕೃಷ್ಣ ಮಹಾಸಂಘದ ಪರಿಹಾರ ಕಾರ್ಯಗಳು–ಅಕ್ಟೋಬರ್ ೨೦೨೧




ಕಸುಂಡಿಯಾ



ದಿಬ್ರೂಗಢ್

**ಕೋವಿಡ್೧೯ ಪರಿಹಾರ ಕಾರ್ಯ:** ರಾಮಕೃಷ್ಣ ಮಹಾಸಂಘದ ಕೆಲವು ಶಾಖಾಕೇಂದ್ರಗಳು ಕೋವಿಡ್–೧೯ ಪರಿಹಾರ ಕಾರ್ಯಗಳನ್ನು ಮುಂದುವರೆಸಿವೆ: ೧) **ಭಾರತದಲ್ಲಿ :** **ರಾಜ್‌ಕೋಟ್** ಕೇಂದ್ರವು ಸೆಪ್ಟೆಂಬರ್ ೧೭ರಂದು ೩೦ ಜನರಿಗೆ ಲಸಿಕೆ ಹಾಕಿಸಿದೆ. **ಭುವನೇಶ್ವರ** ಕೇಂದ್ರವು ಜುಲೈ ೧೭ರಿಂದ ೧೯ರ ವರೆಗೆ ಖುರ್ಧಾ ಜಿಲ್ಲೆಯ ೩೦೦ ಕುಟುಂಬಗಳಿಗೆ ದಿನಸಿ ಹಾಗೂ ಇತರ ಪದಾರ್ಥ ಗಳನ್ನು ವಿತರಿಸಿತು. **ಸೇಲಂ** ಕೇಂದ್ರವು ಸೆಪ್ಟೆಂಬರ್ ೬ ರಂದು ಸರ್ಕಾರಿ ಆಸ್ಪತ್ರೆಗೆ ವಿವಿಧ ವೈದ್ಯಕೀಯ ಉಪಕರಣಗಳನ್ನು ವಿತರಿಸಿದೆ. **ವಾರಾಣಸಿ ಸೇವಾಶ್ರಮವು** ಆಗಸ್ಟ್ ೨೩ರಿಂದ ೨೫ರ ವರೆಗೆ ೬೧೫೨ ಜನರಿಗೆ ಲಸಿಕೆ ಹಾಕಿಸಿದೆ. **ಬಾಗ್‌ಬಜಾರ್** ಕೇಂದ್ರವು ಸೆಪ್ಟೆಂಬರ್ ೧ರಿಂದ ೭ರ ವರೆಗೆ ೩೦೦೪ ಜನರಿಗೆ ಲಸಿಕೆ ಹಾಕಿಸಿದೆ. **ಕಾಮಾರಪುಕುರ** ಕೇಂದ್ರವು ಜುಲೈ , ಆಗಸ್ಟ್, ಸೆಪ್ಟೆಂಬರ್ ತಿಂಗಳಲ್ಲಿ ಬಡ ಜನರಿಗೆ ೯೬೬ ಬೇಯಿಸಿದ ಆಹಾರವನ್ನು ವಿತರಿಸಿತು. ೨) **ವಿದೇಶಗಳಲ್ಲಿ :** ಬಾಂಗ್ಲಾದೇಶ: **ಚಾಂದ್‌ಪುರ್** ಕೇಂದ್ರವು ಆಗಸ್ಟ್ ತಿಂಗಳಲ್ಲಿ ೧೦೦ ಕುಟುಂಬಗಳಿಗೆ ವಿವಿಧ ದಿನಸಿ ಪದಾರ್ಥಗಳನ್ನು ವಿತರಿಸಿತು. **ದಿನಾಜ್‌ಪುರ್** ಕೇಂದ್ರವು ಸೆಪ್ಟೆಂಬರ್ ೨೩ ರಂದು ೪೦ ಕುಟುಂಬಗಳಿಗೆ ದಿನಸಿ ಪದಾರ್ಥಗಳನ್ನು ವಿತರಿಸಿತು. ಫಿಜಿ: **ಫಿಜಿ** ಕೇಂದ್ರವು ಆಗಸ್ಟ್, ಸೆಪ್ಟೆಂಬರ್ ತಿಂಗಳಲ್ಲಿ ೫೯೩ ಕುಟುಂಬ ಗಳಿಗೆ ವಿವಿಧ ದಿನಸಿ ಪದಾರ್ಥ ಗಳನ್ನು ವಿತರಿಸಿತು. ಇದಲ್ಲದೆ, ೬ ಆಸ್ಪತ್ರೆಗಳಿಗೆ ವಿವಿಧ ವೈದ್ಯಕೀಯ ಉಪಕರಣ ಗಳನ್ನೂ ವಿತರಿಸಿತು. ದಕ್ಷಿಣ ಆಫ್ರಿಕಾ : **ಡರ್ಬನ್** ಕೇಂದ್ರವು ಆಗಸ್ಟ್ ತಿಂಗಳಲ್ಲಿ ವಿವಿಧ ಪ್ರದೇಶಗಳಲ್ಲಿ ೪೮೧ ಕುಟುಂಬಗಳಿಗೆ ದಿನಸಿ ಹಾಗೂ ಇತರ ಅಗತ್ಯ ಪದಾರ್ಥಗಳನ್ನು ವಿತರಿಸಿತು. **ಫೀನಿಕ್ಸ್** ಕೇಂದ್ರವು ೧೪ ಕುಟುಂಬಗಳಿಗೆ ವಿವಿಧ ದಿನಸಿ ಪದಾರ್ಥಗಳನ್ನು ವಿತರಿಸಿತು. ಶ್ರೀಲಂಕಾದ **ಬಟ್ಟಿಕಲೋವ** ಕೇಂದ್ರವು ಸೆಪ್ಟೆಂಬರ್ ೨೫–೨೬ರಂದು ಮನ್ನಾರ್ ಮತ್ತು ಬಟ್ಟಿಕಲೋವ ಜಿಲ್ಲೆಗಳಲ್ಲಿ ೫೦೦ ಕುಟುಂಬಗಳಿಗೆ ದಿನಸಿ ಪದಾರ್ಥಗಳನ್ನು ವಿತರಿಸಿತು. ಝಾಂಬಿಯಾದ **ಲುಸಾಕ** ಕೇಂದ್ರವು ಆಗಸ್ಟ್‌ನಲ್ಲಿ ೫೦ ಕುಟುಂಬಗಳಿಗೆ ವಿವಿಧ ದಿನಸಿ ಪದಾರ್ಥಗಳನ್ನು ವಿತರಿಸಿತು.



ನೌರಾ

**ನೆರೆ ಪರಿಹಾರ ಕಾರ್ಯ :** ಎಡೆಬಿಡದೆ ಸುರಿದ ಮಳೆ ಹಾಗೂ ಅದರಿಂದಾದ ಪ್ರವಾಹದಿಂದಾಗಿ ಪಶ್ಚಿಮ ಬಂಗಾಳ, ಅಸ್ಸಾಂ, ಬಿಹಾರ, ಗುಜರಾತ್ ರಾಜ್ಯಗಳಲ್ಲಿ ಸಂಘದ ಶಾಖಾಕೇಂದ್ರಗಳು ಪ್ರಾಥಮಿಕ ಪರಿಹಾರ ಕಾರ್ಯಗಳಲ್ಲಿ ನಿರತವಾಗಿವೆ: **ದಿಬ್ರೂಗಢ್, ಪಾಟ್ನಾ, ರಾಜ್‌ಕೋಟ್, ಬೇಲ್‌ಘಾರಿಯಾ, ಚಂಡಿಪುರ್, ಕೊಂಟ್ಯಾ, ಝಾರ್‌ಗ್ರಾಮ್, ಕಸುಂಡಿಯಾ, ನೌರಾ, ಶಾರದಾಪೀಠ** ಹಾಗೂ **ಸ್ವಾಮಿ ವಿವೇಕಾನಂದರ ನಿವಾಸ** — ಈ ಕೇಂದ್ರಗಳು.

ಬೇಲ್‌ಘಾರಿಯಾ



**ಸಂತ್ರಸ್ತ ಪರಿಹಾರ ಕಾರ್ಯ :** ಭಾರತದಲ್ಲಿ : ಈ ಕೆಳಗಿನ ಕೇಂದ್ರಗಳು ಸಂತ್ರಸ್ತ ಜನರಿಗೆ ವಿವಿಧ ವಸ್ತುಗಳ ವಿತರಣೆ ನಡೆಸಿವೆ: **ಅಸನ್ಸೋಲ್, ಬಾಮುನ್‌ಮುರಾ, ದಾರ್ಜಿಲಿಂಗ್, ದೇವಘರ್, ದಿಬ್ರೂಗಢ್, ಗೌರ್‌ಹಾಟಿ, ಹತಮುನಿಗುಡ, ಜಾಮ್ ತಾರ, ಝಾರ್‌ಗ್ರಾಮ್, ಕಾಮಾರಪುಕುರ, ಮೇದಿನೀಪುರ, ರಾಯ್‌ಗಂಜ್, ಸಿಂಥಿ, ವಡೋದರ, ಬೃಂದಾವನ.** ವಿದೇಶದಲ್ಲಿ: ಬಾಂಗ್ಲಾದೇಶ : **ಬಾಘೇರ್‌ಹಾಟ್, ನಾರಾಯಣಗಂಜ್.**

**ಸಂತ್ರಸ್ತ ಪುನರ್ನಿರ್ಮಾಣ ಕಾರ್ಯ:** **ತಂಜಾವೂರು** ಕೇಂದ್ರವು ತಿರುವಾರೂರು ಜಿಲ್ಲೆಯಲ್ಲಿ ಎರಡು ಮನೆಗಳ ಹಾಗೂ ಒಂದು ಚಹಾದಂಗಡಿಯ ನವೀಕರಣ ಕಾರ್ಯವನ್ನು ಮಾಡಿದೆ.

Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020